# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯ ಸಾಮಾಜಿಕ ಅರಣ್ಯ ಇಲಾಖೆಯಲ್ಲಿ ತೆರವಾಗಿರುವ ಹುದ್ದೆಗಳಿಗೆದುರಾಗಿ ದಿನಗೂಲಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರುಗಳಿಗೆ ವೇತನ ವೆಚ್ಚಕ್ಕಾಗಿ ಅನುದಾನ ಬಿಡುಗಡೆಗೊಳಿಸುವ ಬಗ್ಗೆ

ಓದಲಾಗಿದೆ:

1. ಆರ್ಥಿಕ ಇಲಾಖೆ ವೆಚ್ಚ 5 ಶಾಖೆಯ ಕಡತ ಸಂಖ್ಯೆ: ಆಇ 29 ವೆಚ್ಚ 5/2019 (ಇ-ಆಫೀಸ್)
2. ಸರ್ಕಾರದ ಆದೇಶ ಸಂಖ್ಯೆ: ಆಇ 43 ವೆಚ್ಚ 6/2019 (ಇ-ಆಫೀಸ್) ದಿನಾಂಕ:11.6.2019

ಪ್ರಸ್ತಾವನೆ:

ರಾಜ್ಯದ ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯ ಸಾಮಾಜಿಕ ಅರಣ್ಯ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರ ವೇತನ ವೆಚ್ಚಕ್ಕಾಗಿ ಲೆಕ್ಕ ಶೀರ್ಷಿಕೆ 2406-01-196-1-01-300 (ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ 2406-00-101-0-26-033ರಡಿ) ರೂ.2289.00ಲಕ್ಷಗಳನ್ನು ಒದಗಿಸಿದ್ದು ಈಗಾಗಲೇ ಮೊದಲನೇ ಕಂತಾಗಿ ಏಪ್ರಿಲ್ 2019 ರಿಂದ ಜೂನ್ 2019ರವರೆಗಿನ ವೆಚ್ಚಕ್ಕಾಗಿ ರೂ.6,67,73,782.00ಗಳನ್ನು ಬಿಡುಗಡೆಗೊಳಿಸ ಲಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಸಾಮಾಜಿಕ ಅರಣ್ಯ ಇಲಾಖೆಯಲ್ಲಿ 47 ದಿನಗೂಲಿ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದು ಸದರಿಯವರ ವೇತನ ವೆಚ್ಚಕ್ಕಾಗಿ ರೂ.110.04ಲಕ್ಷಗಳ ಬದಲು ರೂ.10.57ಲಕ್ಷಗಳನ್ನು ನಿಗಧಿಪಡಿಸಿದ್ದರಿಂದ ಸದರಿಯವರುಗಳಿಗೆ ಏಪ್ರಿಲ್ 2019ರಿಂದ ವೇತನ ಭರಿಸಲು ಸಾಧ್ಯವಾಗಿರದ ಪ್ರಯುಕ್ತ ದಿನಾಂಕ:5.9.2019ರಂದು ಸರ್ಕಾರದ ಆದೇಶ ಸಂಖ್ಯೆ: ಆಇ 112 ವೆಚ್ಚ 6/2019 (ಇ-ಆಫೀಸ್) ಮೂಲಕ ಈಗಾಗಲೇ ಮೊದಲನೇ ಕಂತಿನ ಬಿಡುಗಡೆಗೊಳಿಸಿದ ಅನುದಾನವನ್ನು ಕಡಿತಗೊಳಿಸಿ ಎರಡು ತ್ರೈಮಾಸಿಕ ಕಂತುಗಳಲ್ಲಿ ರೂ.51.49ಲಕ್ಷಗಳನ್ನು ಬಿಡುಗಡೆಗೊಳಿಸಿರುವುದರಿಂದ 2ನೇ ತ್ರೈಮಾಸಿಕ ಅನುದಾನ ಬಿಡುಗಡೆಗೊಳಿಸುವ ವೇಳೆಯಲ್ಲಿ ಕಡಿತಗೊಳಿಸಿದೆ. ಆರ್ಥಿಕ ಇಲಾಖೆ ವೆಚ್ಚ 5 ಶಾಖೆಯ ಕಡತ ಸಂಖ್ಯೆ: ಆಇ 196 ವೆಚ್ಚ 5/2019(ಇ-ಆಫೀಸ್)ನಲ್ಲಿ ಈ ಹಿಂದೆ ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿದ್ದ ಹರಪನಹಳ್ಳಿ ತಾಲ್ಲೂಕನ್ನು ಬಳ್ಳಾರಿ ವರ್ಗಾಯಿಸಲಾಗಿರುವುದರಿಂದ ಹರಪನಹಳ್ಳಿ ವ್ಯಾಪ್ತಿಯ ಸಾಮಾಜಿಕ ಅರಣ್ಯ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವಾರ್ಷಿಕ ರೂ.11.76ಲಕ್ಷಗಳು ಅಗತ್ಯವಿರುವುದರಿಂದ ಸದರಿ ಅನುದಾನವನ್ನು ದಾವಣಗೆರೆ ಒದಗಿಸಿರುವ ಅನುದಾನದಿಂದ ಹಿಂಪಡೆದು ಬಳ್ಳಾರಿ ಜಿಲ್ಲೆಗೆ ವರ್ಗಾಯಿಸಲು ಕೋರಿದೆ. ಈಗಾಗಲೇ ಮೊದಲನೇ ಕಂತಾಗಿ ರೂ.2.94ಲಕ್ಷಗಳನ್ನು ದಾವಣಗೆರೆಗೆ ಬಿಡುಗಡೆಗೊಳಿಸಿದ್ದು ದಾವಣಗೆರೆಗೆ ಒಟ್ಟು ರೂ.94,50,276.00ಗಳಲ್ಲಿ ಮೊದಲನೇ ಕಂತಾಗಿ ರೂ.23,62,569.00ಗಳಲ್ಲಿ ರೂ.2.94ಲಕ್ಷಗಳು ಹೆಚ್ಚುವರಿಯಾಗಿ ಬಿಡುಗಡೆಗೊಳಿಸಿರುವುದರಿಂದ 2ನೇ ತ್ರೈಮಾಸಿಕದಲ್ಲಿ ಸದರಿ ಅನುದಾನವನ್ನು ಕಟಾಯಿಸಿ ರೂ.20,68,569.00ಲಕ್ಷಗಳನ್ನು ಬಿಡುಗಡೆಗೊಳಿಸಬೇಕಾಗುತ್ತದೆ. ಅದೇ ರೀತಿ ಬಳ್ಳಾರಿಗೆ ಮೊದಲನೇ ಕಂತಾಗಿ ಬಿಡುಗಡೆಗೊಳಿಸಿರುವ ರೂ.35,00,944.00 ಗಳಿಗೆ ಪ್ರತಿ ತ್ರೈಮಾಸಿಕಕ್ಕೆ ರೂ.2.94ಲಕ್ಷಗಳಂತೆ ಎರಡು ತ್ರೈಮಾಸಿಕಕ್ಕೆ ರೂ.5.88ಲಕ್ಷಗಳನ್ನು ಸೇರಿಸಿ ಬಿಡುಗಡೆಗೊಳಿಸಬೇಕಾಗುತ್ತದೆ. ಅದರಂತೆ ಆಗಸ್ಟ 2019 ರಿಂದ ಅಕ್ಟೋಬರ್ 2019ರವರೆಗಿನ ಸಾಮಾಜಿಕ ಅರಣ್ಯ ಇಲಾಖೆಯ ದಿನಗೂಲಿ ನೌಕರರ ಎರಡನೇ ಕಂತಿನ ಆಗಸ್ಟ 2019 ರಿಂದ ಅಕ್ಟೋಬರ್ 2019ರವರೆಗಿನ ಅನುದಾನ ರೂ.5,04,05,063.00ಗಳನ್ನು ಲೆಕ್ಕ ಶೀರ್ಷಿಕೆ 2406-01-196-1-01-300 (ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ 2406-00-101-0-26-033) ರಡಿ ಬಿಡುಗಡೆಗೊಳಿಸುವ ಸಂಬಂಧ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 43 ವೆಚ್ಚ 6/2019 ದಿನಾಂಕ: 20ನೇ ಸೆಪ್ಟೆಂಬರ್ 2019

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಕೆಳಕಂಡ ಅನುಬಂಧದ ಕಾಲಂ 2ರ ಜಿಲ್ಲಾ ಪಂಚಾಯತಿಗಳಿಗೆ ಅವುಗಳ ವ್ಯಾಪ್ತಿಯ ಸಾಮಾಜಿಕ ಅರಣ್ಯ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರುಗಳ ಏಪ್ರಿಲ್ 2019 ರಿಂದ ಜುಲೈ 2019ರವರೆಗಿನ ವೇತನ ವೆಚ್ಚಕ್ಕಾಗಿ ರೂ.5,04,05,063.00(ರೂಪಾಯಿ ಐದು ಕೋಟಿ ನಾಲ್ಕು ಲಕ್ಷದ ಐದು ಸಾವಿರದ ಅರವತ್ಮೂರು ಮಾತ್ರ)ಗಳನ್ನು (ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ 2406-00-101-0-26-033) ಲಿಂಕ್ ಲೆಕ್ಕ ಶೀರ್ಷಿಕೆ 2406-01-196-1-01-300ರಡಿ ಬಿಡುಗಡೆಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಪುರುಷೋತ್ತಮ್ ಸಿಂಗ್ ಬಿ.ಹೆಚ್.)

ವಿಶೇಷಾಧಿಕಾರಿ(ಜಿ.ಪಂ.)

ಆರ್ಥಿಕ ಇಲಾಖೆ

1. ಮಹಾಲೇಖಪಾಲರು(ಎ&ಇ), ಲೆಕ್ಕ ಪರಿಶೋಧನೆ 1 & 2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಅರಣ್ಯ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಖಜಾನೆ-2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು
4. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು
5. ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು
6. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
7. ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳು
8. ರಕ್ಷಾ ಕಡತಕ್ಕೆ
9. ಹೆಚ್ಚುವರಿ ಪ್ರತಿ

**ಸರ್ಕಾರದ ಆದೇಶ ಸಂಖ್ಯೆ: ಆಇ 43 ವೆಚ್ಚ 6/2019 ದಿನಾಂಕ:20.9.2019ಕ್ಕೆ ಅನುಬಂಧ**

| ಕ್ರ.ಸಂ. | ಜಿಲ್ಲಾ ಪಂಚಾಯತ್ | ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ | 2406-01-196-1-01-300ರಡಿ ಆಗಸ್ಟ್ 2019 ರಿಂದ ಅಕ್ಟೋಬರ್ 2019ರವರೆಗಿನ ವೆಚ್ಚಕ್ಕಾಗಿ ಬಿಡುಗಡೆಗೊಳಿಸಿದ ಅನುದಾನ (ರೂ.ಗಳಲ್ಲಿ) |
|---|---|---|---|
| 1 | ಬಾಗಲಕೋಟೆ | 2406-00-101-0-26-033 | 13,33,169.00 |
| 2 | ಬೆಂಗಳೂರು(ಗ್ರಾ) | 2406-00-101-0-26-033 | 12,73,278.00 |
| 3 | ಬೆಳಗಾವಿ | 2406-00-101-0-26-033 | 47,58,580.00 |
| 4 | ಬಳ್ಳಾರಿ | 2406-00-101-0-26-033 | 35,07,708.00 |
| 5 | ಬೀದರ್ | 2406-00-101-0-26-033 | 29,59,001.00 |
| 6 | ವಿಜಯಪುರ | 2406-00-101-0-26-033 | 25,92,654.00 |
| 7 | ಚಾಮರಾಜನಗರ | 2406-00-101-0-26-033 | 1,47,365.00 |
| 8 | ಚಿಕ್ಕಬಳ್ಳಾಪುರ | 2406-00-101-0-26-033 | 0.00 |
| 9 | ಚಿಕ್ಕಮಗಳೂರು | 2406-00-101-0-26-033 | 10,95,957.00 |
| 10 | ಚಿತ್ರದುರ್ಗ | 2406-00-101-0-26-033 | 23,83,108.00 |
| 11 | ದಕ್ಷಿಣ ಕನ್ನಡ | 2406-00-101-0-26-033 | 2,37,191.00 |
| 12 | ದಾವಣಗೆರೆ | 2406-00-101-0-26-033 | 13,75,215.00 |
| 13 | ಧಾರವಾಡ | 2406-00-101-0-26-033 | 17,71,927.00 |
| 14 | ಗದಗ್ | 2406-00-101-0-26-033 | 19,61,879.00 |
| 15 | ಕಲಬುರ್ಗಿ | 2406-00-101-0-26-033 | 27,80,980.00 |
| 16 | ಹಾಸನ | 2406-00-101-0-26-033 | 24,74,648.00 |
| 17 | ಹಾವೇರಿ | 2406-00-101-0-26-033 | 13,35,419.00 |
| 18 | ಕೋಲಾರ | 2406-00-101-0-26-033 | 19,08,546.00 |
| 19 | ಕೊಪ್ಪಳ | 2406-00-101-0-26-033 | 10,68,738.00 |
| 20 | ಮಂಡ್ಯ | 2406-00-101-0-26-033 | 20,22,648.00 |
| 21 | ಮೈಸೂರು | 2406-00-101-0-26-033 | 27,57,904.00 |
| 22 | ರಾಯಚೂರು | 2406-00-101-0-26-033 | 11,12,121.00 |
| 23 | ರಾಮನಗರ | 2406-00-101-0-26-033 | 17,27,747.00 |
| 24 | ಶಿವಮೊಗ್ಗ | 2406-00-101-0-26-033 | 12,31,253.00 |
| 25 | ತುಮಕೂರು | 2406-00-101-0-26-033 | 39,82,289.00 |
| 26 | ಉಡುಪಿ | 2406-00-101-0-26-033 | 73,682.00 |
| 27 | ಯಾದಗಿರಿ | 2406-00-101-0-26-033 | 25,32,056.00 |
| | ಒಟ್ಟು | | **5,04,05,063.00** |